
ಪ್ರಕೃತಿ ಮಡಿಲಲ್ಲಿ
ರಿಲಾ ಮೊನಾಸ್ಟೆರಿ

ಆ ನೀರು ಮತ್ತೆ ಕಣಿವೆಗೇ ಹೋಗಿ ಸೇರುತ್ತದೆ. ಇಡೀ ಕಣಿವೆಯಲ್ಲಿ ಹಸುರು ಕಾಡಿನ ಶುದ್ಧಗಾಳಿಯ ಹಿತ ತುಂಬಿರುವ ಕಾರಣ ಅತ್ಯಂತ ಶುದ್ಧ, ಪವಿತ್ರವಾದ ಸ್ಥಳವೊಂದಕ್ಕೆ ಬಂದ ಹಿತ ತಂತಾನೇ ಅನುಭವಕ್ಕೆ ಬರುತ್ತದೆ. ಚಳಿಗಾಲದಲ್ಲಿ ಇಲ್ಲಿ ಹಿಮಪಾತವಾಗುವ ಕಾರಣ ಕಡುಚಳಿಯಿರುತ್ತದೆ.

## ಮುನ್ನೂರು ಕೋಣೆಗಳ ಕಟ್ಟಡ

ಈ ಅಂಗಳವನ್ನು ನಾಲ್ಕೂ ಕಡೆ ಸುತ್ತುವರೆದು ನಿಂತ ಐದಂತಸ್ತಿನ ಕಟ್ಟಡ ಕಟ್ಟಲಾಗಿದೆ. ಅತ್ಯಂತ ವಿಶಾಲವಾಗಿರುವ ಈ ಕಟ್ಟಡದಲ್ಲಿ ಮುನ್ನೂರು ಕೋಣೆಗಳಿವೆ. ಎಲ್ಲ ಕೋಣೆಗಳ ಬಾಗಿಲುಗಳು ಅಂಗಣದ ಕಡೆಗೆ ತೆರೆದುಕೊಳ್ಳುತ್ತವೆ. ನಾಲ್ಕು ಪ್ರಾರ್ಥನಾ ಗೃಹಗಳಿವೆ. ದೊಡ್ಡದೊಂದು ಅಡುಗೆ ಮನೆಯಿದೆ. ಅತ್ಯಂತ ಹಳೆಯದೊಂದು ಗ್ರಂಥಾಲಯವೂ ಇಲ್ಲಿದೆ.

ಈ ಲೈಬ್ರರಿಯಲ್ಲಿ 250 ಹಸ್ತಪ್ರತಿಗಳು, 9000 ಮುದ್ರಿತ ಕೃತಿಗಳಿವೆ. ಇಲ್ಲಿ ಕ್ರೈಸ್ತ ಭಿಕ್ಷುಗಳು ವಾಸವಿದ್ದಾರೆ. ಇಲ್ಲಿಯೇ ಉಳಿಯಲು ಬಯಸುವವರಿಗೆ ವಸತಿ ಗೃಹಗಳಿವೆ. ನೆಲದ ಹಂತವೂ ಸೇರಿ ಈ ಐದಂತಸ್ತಿನ ಕಟ್ಟಡಗಳು ಕೋಟೆಯೊಂದರ ಗೋಡೆಯಂತೆ ಕೆಲಸ ಮಾಡುತ್ತವೆ. ಈ ಎತ್ತರದ ಕೋಟೆಯಂತಹ ಕಲ್ಲಿನ ಕಟ್ಟಡಕ್ಕೆ ಸಣ್ಣ ಸಣ್ಣ ಕಿಟಕಿಗಳಿವೆ. ಕಟ್ಟಡದ ಮುಂದೆ ಜಗುಲಿಗಳು ಮತ್ತು ಮಳೆ–ಗಾಳಿ–ಹಿಮದಿಂದ ತಪ್ಪಿಸಿಕೊಂಡು ನಡೆದಾಡಲು ಸೂರಿರುವ ಓಣಿಯಿದೆ.

ಪ್ರವೇಶ ದ್ವಾರದಂತೆಯೇ ನಿರ್ಗಮನಕ್ಕೆ ಹಿಂಬಾಗಿಲೂ ಇದೆ. ಇದರಿಂದಾಚೆ ಪ್ರವಾಸಿಗರು ಉಳಿದುಕೊಳ್ಳಲು ಐಷಾರಾಮಿ ಕಲ್ಲಿನ ಕಟ್ಟಡಗಳು, ಸಣ್ಣ–ಪುಟ್ಟ ಹೋಟೆಲುಗಳು, ಸ್ಮರಣಿಕೆಗಳನ್ನು ಮಾರಾಟ ಮಾಡುವ ಪುಟ್ಟಪುಟ್ಟ ಪೆಟ್ಟಿಗೆ ಅಂಗಡಿಗಳು ಇವೆ. ಆದರೆ ಈ ಹೊರಗಿನ ಕಟ್ಟಡಗಳನ್ನು ಕೂಡ ರಿಲಾ ಮೊನಾಸ್ಟೆರಿ ಕಟ್ಟಲು ಬಳಸಿರುವ ಕಲ್ಲುಗಳಿಂದಲೇ ಕಟ್ಟಲಾಗಿದೆ. ಈ ಸ್ಥಳದ ಸುತ್ತ ಇನ್ಯಾವುದೇ ಆಧುನಿಕ ಕಟ್ಟಡಗಳನ್ನು ನಿರ್ಮಿಸಲು ಅವಕಾಶ ನೀಡಲಾಗಿಲ್ಲ.

ಇಲ್ಲಿ ಒಂದು ಮ್ಯೂಸಿಯಂ ಇದ್ದು, ಅದರಲ್ಲಿ ಧಾರ್ಮಿಕವಾಗಿ ಪ್ರಸಿದ್ಧವಾದ ರಫ್ಯಾಲ್‌ನ ಕ್ರಾಸ್ ಇದೆ. ಒಂದೇ ಮರದ ತೊಲೆಯನ್ನು ಬಳಸಿ ನಿರ್ಮಿಸಿರುವ ಈ ಕ್ರಾಸ್‌ನಲ್ಲಿ 104 ಧಾರ್ಮಿಕ ಸಂದರ್ಭಗಳನ್ನು ಮತ್ತು 650 ಸೂಕ್ಷ್ಮಾತಿಸೂಕ್ಷ್ಮ ಚಿತ್ರಗಳನ್ನು ಕೆತ್ತಲಾಗಿದೆ. ಸೂಕ್ಷ್ಮ ದರ್ಶಕವನ್ನು ಮತ್ತು ಅತಿ ಸಣ್ಣ ಸಾಧನಗಳನ್ನು ಬಳಸಿ ಇಷ್ಟೊಂದು ವಿಚಾರವನ್ನು ಕಲಾತ್ಮಕವಾಗಿ ಕೆತ್ತಲು ರಫ್ಯಾಲ್ ಎನ್ನುವ ಸಂತನಿಗೆ 12 ವರ್ಷಗಳೇ ಬೇಕಾದವಂತೆ. ಆದರೆ, ಆ ವೇಳೆಗೆ ಆತ ತನ್ನ ದೃಷ್ಟಿಯನ್ನೇ ಕಳೆದುಕೊಂಡ ಎನ್ನುವ ಪ್ರತೀತಿಗಳಿವೆ. ಇದನ್ನು 1802ರಲ್ಲಿ ಕೆತ್ತಿ ಮುಗಿಸಿದ ಎನ್ನುತ್ತವೆ ದಾಖಲೆಗಳು.

## ಸಾಹಿತ್ಯ-ಸಂಸ್ಕೃತಿ ಉಳಿಸಿದ ತಾಣ

ಒಟ್ಟೊಮಾನರು ಬಲ್ಗೇರಿಯಾ ದೇಶವನ್ನು ಆಳಲು ಶುರುಮಾಡಿದಾಗ ಈ ಸ್ಥಳ ಬಲ್ಗೇರಿಯಾದ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಉಳಿಸಿದ ಸ್ಥಳ ಎನ್ನುವ ಕಾರಣಕ್ಕೆ ಚರಿತ್ರೆಯಲ್ಲಿ ಸ್ಥಾನ ಪಡೆದಿದೆ.

ಬಲ್ಗೇರಿಯಾ ಆಂತರಿಕ ಕ್ರಾಂತಿ ಮತ್ತು ಪರಕೀಯರ ಆಳ್ವಿಕೆಯಲ್ಲಿ ನರಳಿ, ಮರುಹುಟ್ಟು ಪಡೆದ ಸಂದರ್ಭಗಳಲ್ಲಿ ಈ ಮೊನಾಸ್ಟೆರಿ 1833ರಲ್ಲಿ ಬೆಂಕಿಗೆ ಆಹುತಿಯಾಗಿ ಇಡೀ ದೇಶ ಶೋಕಿಸಿತು. ತಮ್ಮ ರಾಷ್ಟ್ರದ ಆತ್ಮದಂತಹ ಈ ಧಾರ್ಮಿಕ ಮಠವನ್ನು ಪುನರುಜ್ಜೀವನಗೊಳಿಸಲು ಈ ಪುಟ್ಟ ದೇಶದ ಶ್ರೀಮಂತರು ಮತ್ತು ಪ್ರಜೆಗಳು ತಮ್ಮ ಕೈಲಾದಂತೆ ದೇಣಿಗೆ ನೀಡಿದ ಕಾರಣ 1834–1862ರ ಅವಧಿಯಲ್ಲಿ ರಿಲಾ ಮೊನಾಸ್ಟೆರಿಯನ್ನು ಮತ್ತೆ ಕಟ್ಟಲಾಯಿತು. ಸರ್ಕಾರ ಇದೇ ಕಾರಣಕ್ಕೆ ಈ ಮಠವನ್ನು 'ನ್ಯಾಷನಲ್ ಹಿಸ್ಟಾರಿಕಲ್ ಮಾನ್ಯುಮೆಂಟ್' ಎಂದು 1976ರಲ್ಲಿ ಘೋಷಿಸಿತು. ಯುನೆಸ್ಕೋದ ಸಂರಕ್ಷಣೆ ಪಡೆದ ಪ್ರವಾಸೀ ಸ್ಥಳವಾಯಿತು.

ಇಲ್ಲಿಗೆ ಬರುವ ಪ್ರವಾಸಿಗಳಿಗೆ ಗೈಡ್‌ಗಳು ಮತ್ತೊಂದು ಕಥೆಯನ್ನು ಅತಿ ಉತ್ಸಾಹದಿಂದ ಹೇಳುತ್ತಾರೆ. ಬಲ್ಗೇರಿಯಾದ ನ್ಯಾಷನಲ್ ಹೀರೊ, ಕ್ರಾಂತಿಕಾರಿ ವಾಸ್ಸಿಲ್ ಲೆವ್ ಸ್ಕಿ, ಗೋಟ್ಸೆ ಡೆಲ್ಚೆವ್ ಮುಂತಾದವರು ಅವರನ್ನು ಕೊಲ್ಲಲು ಬರುವವರಿಂದ ತಪ್ಪಿಸಿಕೊಳ್ಳಲು ಈ ಮಠದಲ್ಲಿ ಕ್ರೈಸ್ತ ಸನ್ಯಾಸಿಗಳಂತೆ ವೇಷ ಮರೆಸಿ ಆಶ್ರಯ ಪಡೆದಿದ್ದರಂತೆ. ಅಂತಹ ಕ್ರಾಂತಿಕಾರರಿಗೆ ಆಶ್ರಯ ನೀಡಿದ ಮಠ ಕೋಟೆಯ ರೂಪದಲ್ಲಿರುವುದು ಆಶ್ಚರ್ಯವೇನಲ್ಲ. ಇದನ್ನು ಹೇಳುವಾಗ ಮೂವತ್ತರ ಹರೆಯದಲ್ಲೇ ಕೊಲೆಗೀಡಾದ ತಮ್ಮ ಕ್ರಾಂತಿಕಾರಿ ನಾಯಕ ಲೆವ್ ಸ್ಕಿಯ ಬಗೆಗಿನ ಅಭಿಮಾನ ಬಲ್ಗೇರಿಯಾ ದೇಶದವರ ಧ್ವನಿಯಲ್ಲಿ ತುಂಬಿರುವುದು ತೋರುತ್ತದೆ.

ವಿದ್ಯಾದಾನ, ನೊಂದವರಿಗೆ ಆಶ್ರಯ, ಧಾರ್ಮಿಕ ಬೋಧನೆ ಮತ್ತು ಸಾಂಸ್ಕೃತಿಕ ಸ್ಥಳವಾಗಿ ರಿಲಾ ಮೊನಾಸ್ಟೆರಿ ಹಲವು ಮರುಹುಟ್ಟುಗಳನ್ನು ಪಡೆದುಕೊಂಡು ಬಲ್ಗೇರಿಯಾ ದೇಶದ ಒಂದು ಬಹುಮುಖ್ಯ ಭಾಗವಾಗಿ ಮುಂದುವರೆದಿದೆ.

ಪ್ರತಿಕ್ರಿಯಿಸಿ: **feedback@sudha.co.in**